ಕರ್ನಾಟಕ ಸರ್ಕಾರ

ಅರಣ್ಯ ಇಲಾಖೆ

ಸುಲ್ತಾನ್ ಷರೀಫ್ ವೃತ್ತ, ಸತ್ಯಮಂಗಲ ರಸ್ತೆ,
ಚಾಮರಾಜನಗರ –571 313
ದೂರವಾಣಿ : ಕಚೇರಿ: 08226–226229/ 30
ಫ್ಯಾಕ್ಸ್: 08226–226229
ಇ–ಮೇಲ್ : chncirccf@gmail.com

ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳ ಕಚೇರಿ (ಪ್ರಾದೇಶಿಕ), ಚಾಮರಾಜನಗರ

ಸಂಖ್ಯೆ: ಎ2/ಸಿಬ್ಬಂದಿ/ಆನೆ ಕಾವಾಡಿಗ/ಸಿಆರ್–06/2022–23 ದಿನಾಂಕ: 29.05.2023

## ಅಧಿಸೂಚನೆ

ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು (ಅರಣ್ಯ ಪಡೆ ಮುಖ್ಯಸ್ಥರು) ಬೆಂಗಳೂರು ರವರ ಪತ್ರ ಸಂಖ್ಯೆ: ಕೆಎಫ್‌ಡಿ/ಹೆಚ್‌ಓಎಫ್‌ಎಫ್/ಬಿ9(ಆರ್‌ಸಿಟಿ)/11/2022 ಪಿ ಎನ್ ಆರ್ ದಿನಾಂಕ: 28.02.2023 ರಲ್ಲಿ ಚಾಮರಾಜನಗರ ವೃತ್ತ ವ್ಯಾಪ್ತಿಗೆ ಹಂಚಿಕೆ ಮಾಡಲಾದ ಒಟ್ಟು 06 ಸಂಖ್ಯೆ ಆನೆ ಕಾವಾಡಿಗ ಹುದ್ದೆಗಳಿಗೆ ನೇರ ನೇಮಕಾತಿ ಮೂಲಕ ಭರ್ತಿ ಮಾಡಲು ಈ ಕಛೇರಿ ಅಧಿಸೂಚನೆ ಸಂಖ್ಯೆ: ಎ2/ಸಿಬ್ಬಂದಿ/ಆನೆ ಕಾವಾಡಿಗ/ಸಿಆರ್–06/2022–23 ದಿನಾಂಕ: 15.03.2023 ರಂತೆ ಈ ಕೆಳಕಾಣಿಸಿದ ಮೀಸಲಾತಿ ವರ್ಗೀಕರಣದಡಿ ಅರ್ಜಿಗಳನ್ನು ಆಹ್ವಾನಿಸಲಾಗಿದ್ದು, ವಿವರ ಕೆಳಗಿನಂತಿದೆ.

**ಬ್ಯಾಕ್‌ಲಾಗ್ ಹುದ್ದೆಗಳು – 02 ಸಂಖ್ಯೆ**

| ಪ್ರವರ್ಗ ನೇರ ಮೀಸಲಾತಿ (Vertical Reservation) | ಸಮತಳ ಮೀಸಲಾತಿ (Horizontal Reservation) | | | | | | ಒಟ್ಟು |
|---|---|---|---|---|---|---|---|
| | ಇತರೆ | ಮಹಿಳಾ ಅಭ್ಯರ್ಥಿ | ಗ್ರಾಮೀಣ ಅಭ್ಯರ್ಥಿ | ಮಾಜಿ ಸೈನಿಕ | ಕನ್ನಡ ಮಾಧ್ಯಮದಲ್ಲಿ ವ್ಯಾಸಂಗ ಮಾಡಿದ ಅಭ್ಯರ್ಥಿ | ನಿಯೋಜನೆಯಿಂದ ನಿರಾಶ್ರಿತಗೊಂಡ ಅಭ್ಯರ್ಥಿ | |
| ಪ್ರವರ್ಗ–1 | 1 | – | – | – | – | – | 1 |
| ಪ್ರವರ್ಗ–2ಎ | – | 1 | – | – | – | – | 1 |
| ಒಟ್ಟು | 1 | 1 | – | – | – | – | 2 |

**ಮೀಸಲಾತಿ ವರ್ಗೀಕರಣ**

| ಪ್ರವರ್ಗ ನೇರ ಮೀಸಲಾತಿ (Vertical Reservation) | ಸಮತಳ ಮೀಸಲಾತಿ (Horizontal Reservation) | | | | | | ಒಟ್ಟು |
|---|---|---|---|---|---|---|---|
| | ಇತರೆ | ಮಹಿಳಾ ಅಭ್ಯರ್ಥಿ | ಗ್ರಾಮೀಣ ಅಭ್ಯರ್ಥಿ | ಮಾಜಿ ಸೈನಿಕ | ಕನ್ನಡ ಮಾಧ್ಯಮದಲ್ಲಿ ವ್ಯಾಸಂಗ ಮಾಡಿದ ಅಭ್ಯರ್ಥಿ | ನಿಯೋಜನೆಯಿಂದ ನಿರಾಶ್ರಿತಗೊಂಡ ಅಭ್ಯರ್ಥಿ | |
| ಪರಿಶಿಷ್ಟ ಜಾತಿ | 1 | – | – | – | – | – | 1 |
| ಸಾಮಾನ್ಯ ಅರ್ಹತೆ | 1 | 1 | | | | | 2 |
| ಪರಿಶಿಷ್ಟ ಪಂಗಡ | 1 | – | – | – | – | – | 1 |
| ಪ್ರವರ್ಗ–1 | – | – | – | – | – | – | – |
| ಪ್ರವರ್ಗ–2ಎ | – | – | – | – | – | – | – |
| ಪ್ರವರ್ಗ–2ಎ | – | – | – | – | – | – | – |
| ಒಟ್ಟು | 3 | 1 | – | – | – | – | 4 |

ತದನಂತರ ಅರ್ಹ ಅಭ್ಯರ್ಥಿಗಳಿಗೆ ನೇಮಕಾತಿ ಪ್ರಕ್ರಿಯೆಯನ್ನು ನಡೆಸಲು ಈ ಕಛೇರಿ ಅಧಿಕೃತ ಜ್ಞಾಪನ ಪತ್ರ ಸಂಖ್ಯೆ: ಎ2/ಸಿಬ್ಬಂದಿ/ಆನೆ ಕಾವಾಡಿಗ/ಸಿಆರ್–06/2022–23 ದಿನಾಂಕ: 09.05.2023 ರಂದು ಉಪ ಅರಣ್ಯ ಸಂರಕ್ಷಣಾಧಿಕಾರಿ, ಮಲೈ ಮಹದೇಶ್ವರ ವನ್ಯಜೀವಿ ವಿಭಾಗ, ಕೊಳ್ಳೇಗಾಲ ರವರ ನೇತೃತ್ವದಲ್ಲಿ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಹಾಗೂ ವಲಯ ಅರಣ್ಯಾಧಿಕಾರಿಗಳನ್ನೊಳಗೊಂಡಂತೆ ಸಮಿತಿಯನ್ನು ರಚಿಸಲಾಗಿದ್ದು, ಅದರಂತೆ ದಿನಾಂಕ: 16.05.2023 ಮತ್ತು 17.05.2023 ರಂದು ಅರ್ಹ ಅಭ್ಯರ್ಥಿಗಳಿಗೆ ದೈಹಿಕ–ತಾಳ್ವಿಕೆ/ಆನೆ ನಿರ್ವಹಣೆ ಸಾಮರ್ಥ್ಯ/ ಕನ್ನಡ ಭಾಷೆ ತಿಳುವಳಿಕೆ ಸಂದರ್ಶನ ನಡೆಸಲಾಗಿರುತ್ತದೆ.

ಮೇಲಿನಂತೆ ನಿಗಧಿತ ದಿನಾಂಕಗಳಂದು ಸದರಿ ಸಂದರ್ಶನಕ್ಕೆ ಒಟ್ಟು 28 ಸಂಖ್ಯೆ ಅಭ್ಯರ್ಥಿಗಳು ಹಾಜರಾಗಿದ್ದು, ಅದರಲ್ಲಿ 15 ಸಂಖ್ಯೆ ಅಭ್ಯರ್ಥಿಗಳನ್ನು ದಾಖಲಾತಿಗಳ ಆಧಾರದ ಮೇಲೆ ತಿರಸ್ಕರಿಸಲಾಗಿರುತ್ತದೆ. 13 ಸಂಖ್ಯೆ ಅಭ್ಯರ್ಥಿಗಳು ದೈಹಿಕ ಸಾಮರ್ಥ್ಯ ಹಾಗೂ ಆನೆ ನಿರ್ವಹಣೆ ಪರೀಕ್ಷೆಯಲ್ಲಿ ಭಾಗವಹಿಸಿದ್ದು, **07** ಸಂಖ್ಯೆ ಅಭ್ಯರ್ಥಿಗಳನ್ನು ದೈಹಿಕ ಸಾಮರ್ಥ್ಯ ಹಾಗೂ ಮೂಲ ದಾಖಲಾತಿಗಳ ಪರಿಶೀಲನೆಗಳಿಗನುಗುಣವಾಗಿ (ಕರ್ನಾಟಕ ರಾಜ್ಯವ್ಯಾಪ್ತಿಯ ಅಧಿಸೂಚಿತ ಅರಣ್ಯ ಪ್ರದೇಶದೊಳಗೆ ವಾಸವಾಗಿರುವ ಮತ್ತು ಆನೆ ನಿರ್ವಹಣೆ ಅನುಭವದ ಬಗ್ಗೆ) ಆಯ್ಕೆ ಸಮಿತಿಯು ನೀಡಿದ ಗರಿಷ್ಠ ಅಂಕಗಳ ಅನುಸಾರ ಮತ್ತು ಕರ್ನಾಟಕ ನಾಗರೀಕ ಸೇವಾ (ಸಾಮಾನ್ಯ ನೇಮಕಾತಿ) ನಿಯಮಗಳು 1977 ರ ನಿಯಮ 6 ರ ಅನುಸಾರ ಇತರೆ ಅಭ್ಯರ್ಥಿಗಳಿಗೆ ಇರುವ ಗರಿಷ್ಠ ವಯೋಮಿತಿ ಒಳಗಿದ್ದ (ಮೀಸಲಾತಿ, ವರ್ಗೀಕರಣ ಆಧಾರದ ಮೇಲೆ) ಈ ಕೆಳಕಾಣಿಸಿದ ಅಭ್ಯರ್ಥಿಗಳನ್ನು ನೇಮಕಾತಿ ಪ್ರಕ್ರಿಯೆ ಸಮಿತಿಯ ವರದಿಯ ಆಧಾರದ ಮೇರೆಗೆ ಅಂತಿಮವಾಗಿ ಅರ್ಹ ಅಭ್ಯರ್ಥಿಗಳೆಂದು ಪರಿಗಣಿಸಿ ತಾತ್ಕಾಲಿಕ ಆಯ್ಕೆ ಪಟ್ಟಿಯು ಈ ಕೆಳಗಿನಂತಿದೆ.

**<u>ಆನೆ ಕಾವಾಡಿಗ ಹುದ್ದೆಗೆ ನೇರ ನೇಮಕಾತಿ ಮೂಲಕ ಆಯ್ಕೆಗೊಂಡ ಅಭ್ಯರ್ಥಿಗಳ ತಾತ್ಕಾಲಿಕ ಆಯ್ಕೆ ಪಟ್ಟಿ</u>**

| ಕ್ರ.ಸಂ | ಅರ್ಜಿ ಸಂಖ್ಯೆ | ಹೆಸರು (ಶ್ರೀ/ಶ್ರೀಮತಿ) | ಪ್ರವರ್ಗ | ಜನ್ಮ ದಿನಾಂಕ | ಗಂಡು / ಹೆಣ್ಣು | ಒಟ್ಟು ಅಂಕ 100 |
|---|---|---|---|---|---|---|
| **ಬ್ಯಾಕ್‌ಲಾಗ್ ಹುದ್ದೆಗಳು – 02 ಸಂಖ್ಯೆ** | | | | | | |
| 1 | – | – | ಪ್ರವರ್ಗ–1 (ಇತರೆ) | ಸದರಿ ಮೀಸಲಾತಿಗೆ ಯಾವುದೇ ಅಭ್ಯರ್ಥಿಯು ಆಯ್ಕೆಗೊಂಡಿರುವುದಿಲ್ಲ. | | |
| 1 | 67 | ಪಿ.ವೆಂಕಟೇಶ್ | ಪ್ರವರ್ಗ–2ಎ (ಬ್ಯಾಕ್‌ಲಾಗ್ ಹುದ್ದೆ) | 25.05.1995 | ಗಂಡು | 86.16 |

**<u>ಷರಾ:</u>** ಬಂಡೀಪುರ ಹುಲಿ ಯೋಜನೆ ವಿಭಾಗದ 02 ಬ್ಯಾಕ್‌ಲಾಗ್ ಹುದ್ದೆಗಳಲ್ಲಿ ಪ್ರವರ್ಗ–2ಎ ಮಹಿಳಾ ಅಭ್ಯರ್ಥಿಗೆ ಮೀಸಲಿರಿಸಿದ್ದ 01 ಸಂಖ್ಯೆ ಹುದ್ದೆಗೆ ಯಾವ ಮಹಿಳಾ ಅಭ್ಯರ್ಥಿಯು ಲಭ್ಯವಾಗದ ಕಾರಣ ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ:97:ಸೇನೆನಿ:2002 ಬೆಂಗಳೂರು ದಿನಾಂಕ: 22.02.2002ರ ಪ್ರಕಾರ ಸದರಿ ಮೀಸಲಾತಿಗೆ ಪುರುಷ ಅಭ್ಯರ್ಥಿಯಿಂದ ಭರ್ತಿ ಮಾಡಲಾಗಿದೆ.

| ಕ್ರ.ಸಂ | ಅರ್ಜಿ ಸಂಖ್ಯೆ | ಹೆಸರು (ಶ್ರೀ/ಶ್ರೀಮತಿ) | ಪ್ರವರ್ಗ | ಜನ್ಮ ದಿನಾಂಕ | ಗಂಡು / ಹೆಣ್ಣು | ಒಟ್ಟು ಅಂಕ 100 |
|---|---|---|---|---|---|---|
| ನೇರ ನೇಮಕಾತಿ –04 ಸಂಖ್ಯೆ | | | | | | |
| 1 | – | – | ಪರಿಶಿಷ್ಟ ಜಾತಿ (ಇತರೆ) | ಸದರಿ ಮೀಸಲಾತಿಗೆ ಯಾವುದೇ ಅಭ್ಯರ್ಥಿಯು ಆಯ್ಕೆಗೊಂಡಿರುವುದಿಲ್ಲ. | | |
| 2 | 63 | ಸೈಯದ್ ಉಸ್ಮಾನ್ | ಸಾಮಾನ್ಯ ಅರ್ಹತೆ (ಇತರೆ) | 25.06.2004 | ಗಂಡು | 93.83 |
| 3 | – | – | ಸಾಮಾನ್ಯ ಅರ್ಹತೆ (ಮಹಿಳೆ) | ಸದರಿ ಮೀಸಲಾತಿಗೆ ಯಾವುದೇ ಮಹಿಳಾ ಅಭ್ಯರ್ಥಿಯು ಆಯ್ಕೆಗೊಂಡಿರುವುದಿಲ್ಲ. | | |
| 4 | 65 | ಚೇತನ್.ಜೆ.ವಿ | ಪರಿಶಿಷ್ಟ ಪಂಗಡ | 25.06.2001 | ಗಂಡು | 81.33 |

ಮೇಲಿನ ತಾತ್ಕಾಲಿಕ ಆಯ್ಕೆ ಪಟ್ಟಿಯ ಕುರಿತು ಏನಾದರೂ ಆಕ್ಷೇಪಣೆಗಳಿದ್ದಲ್ಲಿ ದಿನಾಂಕ: 31.05.2023 ರ ಸಂಜೆ: 5.30 ರೊಳಗಾಗಿ **ಲಿಖಿತ ರೂಪದಲ್ಲಿ** ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ, ಚಾಮರಾಜನಗರ ವೃತ್ತ, ಚಾಮರಾಜನಗರ ರವರ ಕಛೇರಿಗೆ ಸಲ್ಲಿಸುವುದು.

**ವಿಶೇಷ ಸೂಚನೆ:– ಆಕ್ಷೇಪಣೆಗಳನ್ನು ಸಲ್ಲಿಸಲು ನೀಡಿರುವ ನಿಗಧಿತ ಸಮಯದ ನಂತರ ಬಂದಂತಹ ಆಕ್ಷೇಪಣೆಯನ್ನು ಪರಿಗಣಿಸಲಾಗುವುದಿಲ್ಲವೆಂದು ತಿಳಿಸಿದೆ.**

ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ
ಹಾಗೂ ಆನೆ ಕಾವಾಡಿ ಹುದ್ದೆಯ ನೇರ
ನೇಮಕಾತಿ ಆಯ್ಕೆ ಪ್ರಾಧಿಕಾರ,
ಚಾಮರಾಜನಗರ ವೃತ್ತ, ಚಾಮರಾಜನಗರ.